**ಪ್ರಧಾನ  ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಕನಕಪುರ.**

**ಸಿ.ಸಿ. ನಂ.924/2018**

ಪಿರ್ಯಾದುದಾರರುಃ     ಹಾರೋಹಳ್ಳಿ  ಪೊಲೀಸರು

ವಿರುದ್ದ

ಆರೋಪಿತಃ          ಮಹದೇವಯ್ಯ
ತಂದೆಃ ಮಾದಪ್ಪ
ವಯಸ್ಸು 32 ವರ್ಷಗಳು

ವಾಸಃ ತಟ್ಟೆಕೆರೆ ಗ್ರಾಮ,
ಮರಳವಾಡಿ ಹೋಬಳಿ,
ಕನಕಪುರ  ತಾಲ್ಲೂಕು,
ರಾಮನಗರ ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ದಾಖಲಿಸಿಕೊಂಡ ಆಪಾದಿತನ ಹೇಳಿಕೆ**

ಪ್ರಶ್ನೆ-1)   ಈ ನ್ಯಾಯಾಲಯದಲ್ಲಿ ಸಾಕ್ಷಿದಾರರು ನುಡಿದ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರ ಃ  ಕೇಳಿದ್ದೇನೆ.

ಪ್ರಶ್ನೆ-2)     ಪ್ರಾಸಾ-1/ಶಿವನಯ್ಯ ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ದಿ.29.07.2017 ರಂದು ಮಂಗಳಮ್ಮ ಎನ್ನುವವರು ತನ್ನ ವಿರುದ್ದ ಹಾರೋಹಳ್ಳಿ ಪೊಲೀಸ್ ಠಾಣೆಗೆ ಸುಳ್ಳು ದೂರು ನೀಡಿದ್ದು, ಆ ಕುರಿತು ತಾನು ಹಾರೋಹಳ್ಳಿ ಪೊಲೀಸ್ ಠಾಣೆಗೆ ಹೋಗಿ ದಿನಾಂಕ.08.09.2017ರಂದು ಮನೆಗೆ ಸಂಜೆ 5.00 ಗಂಟೆ ಸುಮಾರಿಗೆ ದ್ವಿಚಕ್ರ ವಾಹನದಲ್ಲಿ ಮರಳುತ್ತಿದ್ದಾಗ ಹಾರೋಹಳ್ಳಿ-ಆನೇಕಲ್ ರಸ್ತೆ, ಗೋದೂರು ಗೇಟ್ ಬಳಿ ಮಹದೇವಯ್ಯ ಮತ್ತು  ಶಿವಶಂಕರ್ ರವರು ತಮ್ಮ ವಾಹನಕ್ಕೆ ಅಡ್ಡಬಂದು ತನ್ನನ್ನು ತಡೆದು ನಿಲ್ಲಿಸಿ ಮಂಗಳಮ್ಮ ಇವರ ಮೂಲಕ ನಿನ್ನ ವಿರುದ್ದ ದೂರು ಕೊಡಿಸಿದ್ದು, ನಮಗೆ ಹಣ ನೀಡದೆ ಇದ್ದರೆ ನಿನ್ನ ಪರವಾಗಿ ಅಪಪ್ರಚಾರ ಮಾಡುತ್ತೇವೆಂದು ಬೆದರಿಕೆ ಹಾಕಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.ಇದಕ್ಕೆ ಏನು ಹೇಳುವಿರಿ ?

ಉತ್ತರ ಃ  ಸುಳ್ಳು.

ಪ್ರಶ್ನೆ-3) ಪ್ರಾಸಾ-1/ಶಿವನಯ್ಯ ಇವರು ಮುಂದುವರೆದು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ತನ್ನ ಪ್ಯಾಂಟಿನ ಜೇಬಿನಲ್ಲಿದ್ದ 2 ಸಾವಿರ ರೂಪಾಯಿ ಹಣವನ್ನು ಶಿವಶಂಕರ್ ಮತ್ತು ಮಹದೇವಯ್ಯ ತೆಗೆದುಕೊಂಡು ಹೋಗಿರುತ್ತಾರೆ. ಅದೇ ದಿನ ಸಂಜೆ 6.00 ಗಂಟೆ ಸುಮಾರಿಗೆ ಹಾರೋಹಳ್ಳಿ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಮರುದಿವಸ ಪೊಲೀಸರು ಘಟನಾ ಸ್ಥಳಕ್ಕೆ ಬಂದು ಪಂಚರ ಸಮಕ್ಷಮ ಪಂಚನಾಮೆ ಮಾಡಿ ತನ್ನ ಸಹಿಯನ್ನು ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ದೂರನ್ನು, ಪಂಚನಾಮೆಯನ್ನು, ಅವುಗಳಲ್ಲಿರುವ ತನ್ನ ಸಹಿಗಳನ್ನು ಹಾಗೂ ಆರೋಪಿಯಾದ ನಿಮ್ಮನ್ನು ನೋಡಿ ಗುರುತಿಸುತ್ತಾರೆ. ಇದಕ್ಕೆ ಏನು ಹೇಳುವಿರಿ ?

ಉತ್ತರ ಃ ಸುಳ್ಳು.

ಪ್ರಶ್ನೆ-4) ಪ್ರಾಸಾ-2/ನಾಗೇಶ್ ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ದಿನಾಂಕ.08.11.2017 ರಂದು ಗಲಾಟೆಯಾದ ಸ್ಥಳದಲ್ಲಿ ಮಹಜರ್ ಮಾಡುವ ಕಾಲಕ್ಕೆ ತಾನು ನಿಪಿ-2ಕ್ಕೆ ಸಹಿ ಮಾಡಿರುತ್ತೇನೆ. ಬೆಳಿಗ್ಗೆ 10.30 ರಿಂದ 11.30 ಗಂಟೆಯ ಒಳಗೆ ನಿಪಿ-2ಕ್ಕೆ ತಾನು ಸಹಿ ಮಾಡಿರುತ್ತೇನೆ. ಆ ದಿನ ನಿಪಿ-2ನ್ನು ತಯಾರಿಸುವಾಗ ಸ್ಥಳದಲ್ಲಿ ತಾನು ಮತ್ತು ಮಹದೇವಯ್ಯ ಎನ್ನುವವರು ಮಾತ್ರ ಇದ್ದೆವು, ತಮ್ಮನ್ನು ಹೊರತು ಪಡಿಸಿ ಮತ್ಯಾರು ಇರಲಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಸ್ಥಳ ಪಂಚನಾಮೆಯನ್ನು, ಅದರಲ್ಲಿರುವ ತನ್ನ ಸಹಿಯನ್ನು ಹಾಗೂ ಆರೋಪಿಯಾದ ನಿಮ್ಮನ್ನು ನೋಡಿ ಗುರುತಿಸುತ್ತಾರೆ. ಇದಕ್ಕೆ ಏನು ಹೇಳುವಿರಿ ?

ಉತ್ತರ ಃ ಸುಳ್ಳು.

ಪ್ರಶ್ನೆ-5) ಪ್ರಾಸಾ-6/ಕೃಷ್ಣಕುಮಾರ್.ಸಿ, ಪಿ.ಐ, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ದಿನಾಂಕ.08.12.2017 ರಂದು ರಾತ್ರಿ 8.30ಕ್ಕೆ ತಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದುಕೊಂಡು ಅದರ ಆಧಾರದ ಮೇಲೆ ತಮ್ಮ ಠಾಣಾ ಮೊಕದ್ದಮೆ ಸಂಖ್ಯೆ ನಂ.554/2017 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ

ನ್ಯಾಯಾಲಯಕ್ಕೆ ಮತ್ತು ತನ್ನ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ದಿನಾಂಕ.09.12.2017ರಂದು ಬೆಳಗಿನ ಜಾವ ಆರೋಪಿಯನ್ನು ತಟ್ಟೆಕೆರೆ ಗ್ರಾಮದಿಂದ ಠಾಣೆಗೆ ಕರೆದುಕೊಂಡು ಬಂದು ತನ್ನ ಸಮಕ್ಷಮ ಹಾಜರುಪಡಿಸಿದ ಮೇರೆಗೆ ಆತನನ್ನು ವಿಚಾರಿಸಿ ಆತನ ಸ್ವಇಚ್ಚಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿಯ ಸ್ವಇಚ್ಚಾ ಹೇಳಿಕೆಯ ಆಧಾರದ ಮೇಲೆ ಆರೋಪಿಯು ಸುಲಿಗೆ ಮಾಡಿದಂತಹ ಎರಡು ಸಾವಿರ ರೂಪಾಯಿಯನ್ನು ಆತನಿಂದ ಅಮಾನತ್ತು ಪಡಿಸಿಕೊಂಡು ಪಂಚರಾದ ಚಾಸಾ-4 ಮತ್ತು ಚಾಸಾ-5 ರವರ ಸಮಕ್ಷಮ ಬೆಳಿಗ್ಗೆ 5.10 ರಿಂದ 5.40ಗಂಟೆ ಸಮಯದವರೆಗೆ ಪಂಚನಾಮೆಯನ್ನು ತಯಾರಿಸಿರುತ್ತೇನೆ. ನಂತರ ಅದೇ ದಿನ ಬೆಳಿಗ್ಗೆ 10.30 ರಿಂದ 11.00ರ ವರೆಗೆ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳುವಿರಿ ?

ಉತ್ತರ ಃ ಸುಳ್ಳು.

ಪ್ರಶ್ನೆ-6) ಪ್ರಾಸಾ-6/ಕೃಷ್ಣಕುಮಾರ್.ಸಿ, ಪಿ.ಐ, ಇವರು ಮುಂದುವರೆದು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ದಿನಾಂಕ.12.12.2017 ರಂದು ಚಾಸಾ-1 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ.15.12.2017 ರಂದು ಆರೋಪಿಯ ಮರುಹೇಳಿಕೆಯನ್ನು ಹಾಗೂ ಚಾಸಾ-2 ಮತ್ತು ಚಾಸಾ-3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಆಪರಾಧ ಸಾಬೀತಾದ ಕಾರಣಕ್ಕೆ ದೋಷರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ದೂರನ್ನು, ಪ್ರಥಮ ವರ್ತಮಾನ ವರದಿಯನ್ನು, ಸ್ಥಳ ಮತ್ತು ಅಮಾನತ್ತು ಪಂಚನಾಮೆಯನ್ನು, ಅವುಗಳಲ್ಲಿರುವ ತನ್ನ ಸಹಿಗಳನ್ನು ಹಾಗೂ ಆರೋಪಿಯಾದ ನಿಮ್ಮನ್ನು ನೋಡಿ ಗುರುತಿಸುತ್ತಾರೆ. ಇದಕ್ಕೆ ಏನು ಹೇಳುವಿರಿ ?

ಉತ್ತರ ಃ ಸುಳ್ಳು.

ಪ್ರಶ್ನೆ-7) ನಿಮ್ಮ ಪರ ಪ್ರತಿರಕ್ಷಣೆಯ ಸಾಕ್ಷ್ಯ ವಿಚಾರಣೆ ಮಾಡುವುದಿದೆಯಾ?

ಉತ್ತರ ಃ ಇಲ್ಲ.

ಪ್ರಶ್ನೆ-8) ನಿಮ್ಮ ಪರವಾಗಿ ನೀವು ಏನನ್ನಾದರೂ ಹೇಳುವುದಿದೆಯಾ?

ಉತ್ತರ ಃ ಇಲ್ಲ.

ಈ ಮೇಲಿನ ಹೇಳಿಕೆಗಳನ್ನು ಆಪಾದಿತನಿಗೆ ಓದಿ ಹೇಳಿ ಆಪಾದಿತನು ನೀಡಿದ ಉತ್ತರವನ್ನು ಆತ ಹೇಳಿದಂತೆ ಯಥವತ್ತಾಗಿ ದಾಖಲಿಸಿದೆ ಎಂದು ದೃಢೀಕರಿಸುತ್ತೇನೆ.

ಸಹಿ/-

ದಿನಾಂಕಃ 21-04-2026.

(ಶ್ರೀಮತಿ ರಾಧಾ. ಎಸ್)
ಪ್ರಧಾನ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ, ಕನಕಪುರ.